

ಯಲ್ಲಾಪುರ ತಾಲ್ಲೂಕಿನಲ್ಲಿರುವ ಮಾಗೋಡ ಜಲಪಾತ

## ವಿಭೂತಿ ಜಲಪಾತ

ಅಂಕೋಲಾ ತಾಲ್ಲೂಕಿನ ಅಚವೆ ಗ್ರಾಮದಲ್ಲಿರುವ ಈ ಜಲಪಾತವು ಎರಡು ಹಂತಗಳಲ್ಲಿ ಬಂಡೆಗಳಿಂದ ಧುಮ್ಮಿಕ್ಕುತ್ತದೆ. ಅಚ್ಚ ಬಿಳಿಯಾಗಿ ಕಾಣುವ ನೀರಿನ ಕಾರಣಕ್ಕೆ ವಿಭೂತಿ ಜಲಪಾತ ಎಂಬ ಹೆಸರು ಬಂದಿದೆ. ಮಾಬಗೆ ನದಿಯು 200 ಮೀಟರ್ ಎತ್ತರದಿಂದ ಧುಮ್ಮಿಕ್ಕುತ್ತ ಜಲಪಾತವನ್ನು ಸೃಷ್ಟಿಸಿದೆ. ಜಲಪಾತಕ್ಕೆ ಸಮೀಪದವರೆಗೆ ವಾಹನ ಸಾಗಲು ಸಾಧ್ಯವಿದೆ. ಅರ್ಧ ಕಿ.ಮೀ.ನಷ್ಟು ನಡಿಗೆ ಅನಿವಾರ್ಯ.

## ಮಾಗೋಡ ಜಲಪಾತ

ಯಲ್ಲಾಪುರ ತಾಲ್ಲೂಕಿನ ಮಾಗೋಡದಲ್ಲಿ ಬೇಡ್ತಿ ನದಿಯು 650 ಮೀಟರ್‌ನಷ್ಟು ಎತ್ತರದಿಂದ ಎರಡು ಹಂತದಲ್ಲಿ ಧುಮ್ಮಿಕ್ಕುವ ಸೊಬಗು ನೋಡಲು ಸಾಧ್ಯವಿದೆ. ಎದುರಿನಲ್ಲಿರುವ ಗುಡ್ಡದಲ್ಲಿ ನಿರ್ಮಿಸಿದ ವೀಕ್ಷಣಾ ಗೋಪುರದ ಬಳಿ ನಿಂತು ಈ ಸೊಬಗು ಕಣ್ತುಂಬಿಕೊಳ್ಳಬಹುದು. ಯಲ್ಲಾಪುರ ಪಟ್ಟಣದಿಂದ ಸಮೀಪದಲ್ಲಿಯೇ ಜಲಪಾತವಿದೆ.



ಸಿದ್ದಾಪುರ ತಾಲ್ಲೂಕಿನ ಉಂಚಳ್ಳಿಯಲ್ಲಿರುವ ಉಂಚಳ್ಳಿ ಜಲಪಾತ (ಲೂಶಿಂಗ್ಟನ್ ಜಲಪಾತ)

## ಸಾತೊಡ್ಡಿ ಜಲಪಾತ

ಉತ್ತರ ಕನ್ನಡ ಜಿಲ್ಲೆಯ ನಯಾಗರಾ ಜಲಪಾತ ಎಂದೇ ಖ್ಯಾತಿ ಪಡೆದಿರುವ ಸಾತೊಡ್ಡಿ ಜಲಪಾತ ಕಾಳಿನದಿಯು ಎತ್ತರದಿಂದ ಬೀಳುತ್ತ ಸೃಷ್ಟಿಸಿದ ತಾಣ. ಬಂಡೆಗಲ್ಲುಗಳಿಂದ 32 ಮೀಟರ್ ಎತ್ತರದಿಂದ ಸಾಲುಸಾಲಾಗಿ ಬೀಳುವ ನೀರು ಸುಂದರ ಜಲಪಾತ ಸೃಷ್ಟಿಸಿದೆ. ಯಲ್ಲಾಪುರ ಪಟ್ಟಣಕ್ಕೆ ಸಮೀಪದಲ್ಲಿರುವ ಜಲಪಾತಕ್ಕೆ ಮಳೆಗಾಲದ ಬಳಿಕ ಸಾಗಲು ಸಾಧ್ಯವಾಗುತ್ತದೆ. ಜಲಪಾತದ ಕೆಳಗೆ ನದಿಯು ರಭಸವಾಗಿ ಹರಿಯುವ ಕಾರಣಕ್ಕೆ ಮಳೆಗಾಲದ ಅವಧಿಯಲ್ಲಿ ಸಾಗಲು ಸಾಧ್ಯವಾಗದು.

## ಶಿರ್ಲೆ ಜಲಪಾತ

ಯಲ್ಲಾಪುರ–ಅಂಕೋಲಾ ಹೆದ್ದಾರಿಯ ನಡುವೆ ಶಿರ್ಲೆ ಸಮೀಪ ಕಾಣಸಿಗುವ ಜಲಪಾತ ದಟ್ಟ ಅರಣ್ಯದ ನಡುವೆ ಹಾಲ್ನೊರೆ ಹರಿಯುತ್ತಿರುವಂತೆ ಭಾಸವಾಗುತ್ತದೆ. ಮುಖ್ಯ ರಸ್ತೆಯಿಂದ ಸುಮಾರು ಅರ್ಧ ಕಿ.ಮೀನಷ್ಟು ಕಡಿದಾದ ಕಣಿವೆ ಇಳಿದು ಸಾಗಿದರೆ ಗಂಗಾವಳಿಯ ಉಪನದಿ ಸಂಪೆಕೊಡ್ಲು 72 ಮೀಟರ್ ಎತ್ತರದಿಂದ ಧುಮ್ಮಿಕ್ಕುತ್ತ ಸೃಷ್ಟಿಸಿದ ಶಿರ್ಲೆ ಜಲಪಾತ ಕಣ್ತುಂಬಿಕೊಳ್ಳಬಹುದು.



ಅಂಕೋಲಾ ತಾಲ್ಲೂಕಿನಲ್ಲಿರುವ ವಿಭೂತಿ ಜಲಪಾತ

## ಶಿವಗಂಗಾ ಜಲಪಾತ

ಶಿರಸಿ ತಾಲ್ಲೂಕಿನ ಜಡ್ಡಿಗದ್ದೆ ಬಳಿಯ ದಟ್ಟ ಅರಣ್ಯದಲ್ಲಿರುವ ಶಿವಗಂಗಾ ಜಲಪಾತವನ್ನು ಕಿ.ಮೀಗಟ್ಟಲೆ ದೂರದಲ್ಲಿರುವ ವೀಕ್ಷಣಾ ಗೋಪುರದಿಂದ ನೋಡುವುದೇ ಚೆಂದ. ದಟ್ಟ ಅಡವಿಯ ನಡುವೆ ಹರಿಯುವ ಶಾಲ್ಮಲಾ ನದಿಯು ಸುಮಾರು 74 ಮೀಟರ್ ಎತ್ತರದಿಂದ ಇಳಿಯುತ್ತ ಸುಂದರ ಜಲಪಾತ ಸೃಷ್ಟಿಸಿದೆ. ಬೇಸಿಗೆಯಲ್ಲಿ ಮಾತ್ರ ಸಾಹಸಿಗರು ಜಲಪಾತಗಳ ಸಮೀಪದವರೆಗೆ ತೆರಳಲು ಸಾಧ್ಯವಾಗುತ್ತದೆ. ಇದಕ್ಕೆ 2–3 ಕಿ.ಮೀ ದೂರ ಕಡಿದಾದ ಕಣಿವೆಯಲ್ಲಿ ಇಳಿಯುತ್ತ, ನದಿಯ ಬಂಡೆಗಳ ಮೇಲೆ ಸಾಹಸದ ನಡಿಗೆ ಮೂಲಕ ಸಾಗಬೇಕಾಗುತ್ತದೆ.

## ಮುರೇಗಾರ ಜಲಪಾತ

ಶಿರಸಿ ತಾಲ್ಲೂಕಿನ ಮುರೇಗಾರ ಬಳಿ ಶಾಲ್ಮಲಾ ನದಿಯಲ್ಲಿರುವ ಬಂಡೆಕಲ್ಲುಗಳಿಂದ ನೀರು ಹಂತ ಹಂತವಾಗಿ ಇಳಿದು ಸಾಗುವಾಗ ಸೃಷ್ಟಿಯಾದ ಜಲಪಾತಕ್ಕೆ ಮುರೇಗಾರ ಅಥವಾ ಶಿರ್ಲೆಬೈಲ್ ಜಲಪಾತ ಎಂಬ ಹೆಸರು ಬಂದಿದೆ. ಮಳೆಗಾಲದಲ್ಲಿ ಜಲಪಾತ ನೋಡಲು ಸಾಧ್ಯವಾಗದು. ಅಕ್ಟೋಬರ್ ಬಳಿಕ ಹಾಲ್ನೊರೆಯಂತೆ ಧುಮ್ಮಿಕ್ಕುವ ಜಲಪಾತ ಕಣ್ತುಂಬಿಕೊಳ್ಳಬಹುದು. ಜಲಪಾತದವರೆಗೆ ವಾಹನದಲ್ಲಿ ಸಾಗಲು ಸಾಧ್ಯವಿದೆ.

## ಬುರುಡೆ ಜಲಪಾತ

ಸಿದ್ದಾಪುರ ತಾಲ್ಲೂಕಿನ ಕ್ಯಾದಗಿ ಸಮೀಪದ ಇಳಿಮನೆ ಎಂಬಲ್ಲಿರುವ ಜಲಪಾತವು ಉಪನದಿಯೊಂದು ಎರಡು ಹಂತಗಳಲ್ಲಿ ಬಂಡೆಗಳಿಂದ ಧುಮ್ಮಿಕ್ಕುತ್ತ ಸೃಷ್ಟಿಯಾಗಿದೆ. 68 ಮೀಟರ್ ಎತ್ತರದಿಂದ ಜಲಧಾರೆಯೊಂದು ಧುಮ್ಮಿಕ್ಕುತ್ತ, ನಂತರ 48 ಮೀಟರ್ ಎತ್ತರದಿಂದ ಎರಡನೇ ಹಂತದಲ್ಲಿ ಧುಮ್ಮಿಕ್ಕುವ ಸೊಬಗು ಕಣ್ತುಂಬಿಕೊಳ್ಳುವುದು ವಿಶಿಷ್ಟ ಅನುಭೂತಿ ನೀಡುತ್ತದೆ.